**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.262/2023**

ಸಾಕ್ಷಿದಾರರ ಹೆಸರು : ಶಂಕುತಲಾ ಬಿ.ವಿ ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 2

ಗಂಡನ ಹೆಸರು : ಅಶ್ವತ್ ಎಂ.ಆರ್

ವಯಸ್ಸು : 50 ವರ್ಷ

ಉದ್ಯೋಗ : ಶಿಕ್ಷಕಿ

ವಾಸಸ್ಥಳ : ಸುಶಾಂತ್ ನಗರ, ಮೂಡಿಗೆರೆ

ದಿನಾಂಕಃ 12.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನಾನು ಕಳೆದ 10 ವರ್ಷಗಳಿಂದ ಗೋಣಿಬೀಡುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ನಮ್ಮ ಶಾಲೆಯಲ್ಲಿ ಅಕ್ಷರ ದಾಸೋಹದ ಬಿಸಿ ಊಟಕ್ಕಾಗಿ ಸರ್ಕಾರದಿಂದ ವರ್ಷ 3-4 ಬಾರಿ ಹಣ ಮಂಜೂರಾಗಿ ಬರುತ್ತದೆ. ನಮ್ಮ ಶಾಲೆಯ ಅಕ್ಷರ ದಾಸೋಹ ಬ್ಯಾಂಕ್ ಖಾತೆಯ ಸಂಖ್ಯೆ 1162101016113 ಕೆನರಾ ಬ್ಯಾಂಕ್ ಮೂಡಿಗೆರೆ ಶಾಖೆಗೆ ಜಮಾ ಆಗುತ್ತದೆ. ಸದರಿ ಬ್ಯಾಂಕ್ ಖಾತೆಯು ಚಾಸಾ.1 ಮತ್ತು 3 ರವರ ಜಂಟಿ ಹೆಸರಿನಲ್ಲಿ ಇರುತ್ತದೆ. ಪ್ರತಿ ತಿಂಗಳು ಬಿಸಿ ಊಟದ ಖರ್ಚು ವ್ಯಚ್ಚವನ್ನು ನಾವು ಬ್ಯಾಂಕಿನ ಸದರಿ ಖಾತೆಯಿಂದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಖರ್ಚು ಮಾಡಿದ ವ್ಯಚ್ಚವನ್ನು ನಗದೀಕರಣ ಮಾಡುತ್ತೇವೆ. 2022 ರ ಜೂನ್ ತಿಂಗಳಿನಲ್ಲಿ ಖರ್ಚು ಮಾಡಿರುವ ರೂ.16572-00 ನ್ನು ಚೆಕ್ಕನ್ನು ನಗದೀಕರಣ ಮಾಡಲು ನಾನು ದಿ:16.07.2022 ರಂದು ಬ್ಯಾಂಕಿಗೆ ಹೋಗಿರುತ್ತೇನೆ. ಚೆಕ್ಕನ್ನು ನಗದೀಕರಣ ಮಾಡಿದ ನಂತರ ಪಾಸ್ ಪುಸ್ತಕವನ್ನು ಎಂಟ್ರಿ ಮಾಡಿ ಪರಿಶೀಲಿಸಿದಾಗ ಅಕ್ಷರ ದಾಸೋಹ ಖಾತೆಯಿಂದ ಸುಮಾರು

16 ಬಾರಿ online banking ಮೂಲಕ ಚಾಸಾ.3 ರವರ ಮಗನಾಗದ ಆರೋಪಿಯ ಖಾತೆಗೆ ಹಣ ಜಮಾ ಆಗಿರುವುದು ಕಂಡು ಬಂದಿರುತ್ತದೆ. ಕೆನರಾ ಬ್ಯಾಂಕ್ ಮೂಡಿಗೆರೆಯಲ್ಲಿ ಹೋಗಿ ವಿಚಾರಿಸಿದಾಗ ಸದರಿ ಖಾತೆಯ ಹಣವು ಕರ್ನಾಟಕ ಬ್ಯಾಂಕ್ ಗೋಣಿಬೀಡು ಶಾಖೆಯ ಖಾತೆಗೆ ವರ್ಗಾವಣೆಯಾಗಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ಚಾಸಾ.1 ರವರಿಗೆ ಕರೆ ಮಾಡಿ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನಾನು ಕರ್ನಾಟಕ ಬ್ಯಾಂಕ್ ಮೂಡಿಗೆರೆ ಶಾಖೆಯಲ್ಲಿ ಈ ಬಗ್ಗೆ ವಿಚಾರಿಸುತ್ತಿದ್ದಾಗ ಚಾಸಾ.1 ರವರು ಬಂದಿರುತ್ತಾರೆ. ಆಗ ಚಾಸಾ.3 ರವರ ಮಗನಾದ ಆರೋಪಿಯು ಸದರಿ ಕೃತ್ಯವನ್ನು ಎಸಗಿರುವ ಬಗ್ಗೆ ಮೂಡಿಗೆರೆಯ ಕರ್ನಾಟಕ ಬ್ಯಾಂಕ್ ಶಾಖೆಯಲ್ಲಿ ನಮಗೆ ತಿಳಿದು ಬಂದಿರುತ್ತದೆ. ಆರೋಪಿಯು ನಮ್ಮ ಶಾಲೆಯ ಅಕ್ಷರ ದಾಸೋಹ ಖಾತೆಯಿಂದ ರೂ.3,62,667-20 ನ್ನು ದಿಃ 28.04.2022 ರಿಂದ ದಿಃ 27.06.2022 ರವರೆಗೆ ವರ್ಗಾವಣೆ ಮಾಡಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಿ.ಪಿ.5 ದಾಖಲೆಯು ಆರೋಪಿಯ ವಶದಿಂದ ಪಡೆದಿರುವ 3 ಲಕ್ಷ ರೂಪಾಯಿಯನ್ನು ಪುನಃ ನಮ್ಮ ಶಾಲೆಯ ಬ್ಯಾಂಕ್ ಖಾತೆಗೆ ಹಾಕಿರುವ ರಸೀದಿ ಆಗಿರುತ್ತದೆ.

**ಪಾಟೀ ಸವಾಲು ಶ್ರೀ ಡಿ.ಕೆ.ಪಿ. ವಕೀಲರಿಂದ – ಆರೋಪಿತನ ಪರವಾಗಿ**

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿನಾಂಕಃ 03.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಶ್ರೀ ಕೆ.ಎಂ.ಪಿ. ವಕೀಲರಿಂದ – ಆರೋಪಿತನ ಪರವಾಗಿ</u>

4. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ದಿಃ 06.08.2022 ರಂದು ನಾನು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ನಾನು ಗೋಣಿಬೀಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ದಿಃ 14.05.2014 ರಿಂದ ನಾನು ಗೋಣಿಬೀಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಸಹ ಶಿಕ್ಷಕಿ ಹುದ್ದೆಯು ಮುಖ್ಯ ಶಿಕ್ಷಕಿಯ ಹುದ್ದೆಗಿಂತ ಕೆಳಭಾಗದಲ್ಲಿ ಇರುವ ಹುದ್ದೆ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ಗೋಣಿಬೀಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದು ಹೇಳಿಕೆ ನೀಡಿರುತ್ತೇನೆ. ಶಿಕ್ಷಕರಿಗೆ ಸಹ ಶಿಕ್ಷಕಿಯವರಿಂದ ಹೆಚ್ಚು ಸಂಬಳ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಶಿಕ್ಷಕರು ಯಾರು ಎಂದು ಅರ್ಥವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಗೋಣಿಬೀಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾನು ಬಿಸಿ ಊಟದ ಮೇಲ್ವಿಚಾರಕಾಗಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ಕಳೆದ 5-6 ವರ್ಷಗಳಿಂದ ನಾನು ಬಿಸಿ ಊಟದ ಮೇಲ್ವಿಚಾರಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಬಿಸಿ ಊಟದ ಮೇಲ್ವಿಚಾರಕರಿಗೆ ಬಿಳಿ ಊಟಕ್ಕೆ ಬೇಕಾಗಿರುವ ಎಲ್ಲಾ ಸಾಮಗ್ರಿಗಳನ್ನು ವದಗಿಸುವ ಜವಾಬ್ದಾರಿ ಇರುತ್ತದೆ ಎಂದರೆ ಸರಿ. 2017-2018 ರಿಂದ ನಾನುಬಿಸಿ ಊಟದ ಮೇಲ್ವಿಚಾರಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಗೋಣಿಬೀಡುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದಲ್ಲಿ ಆರೋಪಿಗೆ ತರಕಾರಿ ಅಂಗಡಿ ಇರುತ್ತದೆ ಎಂದರೆ ಸಾಕ್ಷಿಯು ತರಕಾರಿ ಅಂಗಡಿ ಮೊದಲು ಇತ್ತು ಎಂದು ನುಡಿಯುತ್ತಾರೆ.

ಆರೋಪಿಯ ತರಕಾರಿ ಅಂಗಡಿಯು ಯಾವ ಇಸವಿ ವರೆಗೆ ಇತ್ತು ಎಂದು ನನಗೆ ನೆನಪಿಲ್ಲ. ನಮ್ಮ ಶಾಲೆಯ ಬಿಳಿ ಊಟಕ್ಕೆ ಆರೋಪಿಯ ಅಂಗಡಿಯಿಂದಲೇ ತರಕಾರಿ ಖರೀದಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ಸ್ವಂತಕ್ಕೆ ನಾನು ಆರೋಪಿಯ ಅಂಗಡಿಯಿಂದ ತರಕಾರಿ ಖರೀದಿ ಮಾಡುತ್ತಿದ್ದೆನು. ನಮ್ಮ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಇರುತ್ತದೆ ಎಂದರೆ ಸರಿ. 2024-25 ನೇ ಸಾಲಿನಲ್ಲಿ  ಹೆಚ್.ಬಿ. ಗಿರೀಶ್ ರವರು  ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿರುತ್ತಾರೆ. 2024 ರ ಪೂರ್ವದಲ್ಲಿ ಆನಂದ್ ಎನ್ನುವವರು ಎಸ್.ಡಿ.ಎಂ.ಸಿ  ಅಧ್ಯಕ್ಷರಾಗಿದ್ದರು. 2022 ರಲ್ಲಿಯು ಆನಂದ್ ಎನ್ನುವವರೇ ಎಸ್.ಡಿ.ಎಂ.ಸಿ  ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದರು.  ಎಸ್.ಡಿ.ಎಂ.ಸಿ ಅಧ್ಯಕ್ಷ ಹುದ್ದೆಯು 3 ವರ್ಷಗಳಿಗೊಮ್ಮೆ ಬದಲಾವಣೆಯಾಗುತ್ತದೆ. ಯಾವಾಗದಿಂದ ಆನಂದ್ ರವರು ಎಸ್.ಡಿ.ಎಂ.ಸಿ  ಅಧ್ಯಕ್ಷರಾಗಿರುತ್ತಾರೆ ಎಂದು ನನಗೆ ನೆನಪಿಲ್ಲ.

5. ಬಿಸಿ ಊಟದ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸುತ್ತಿರುವವರಿಗೆ ಪ್ರತಿ ದಿನದ ಬಿಸಿ ಊಟದ ಖರ್ಚು ವ್ಯಚ್ಚಗಳನ್ನು ಅಕ್ಷರದಾಸೋಹ ಪುಸ್ತಕದಲ್ಲಿ ಬರೆದಿಡುವ ಕೆಲಸ ಇರುತ್ತದೆ. ಬಿಸಿ ಊಟಕ್ಕೆ ಸಂಬಂಧಪಟ್ಟಂತೆ ನಗದು ನಿರ್ವಾಹಣೆಯ ಬಗ್ಗೆ ಪ್ರತ್ಯೇಕ ಪುಸ್ತಕ ಇರುತ್ತದೆ. ಅಕ್ಷರದಾಸೋಹದ ನಗದು ಪುಸ್ತಕ ಮತ್ತು ಅಕ್ಷರದಾಸೋಹ ಖರ್ಚು ವ್ಯಚ್ಚಗಳ ಪುಸ್ತಕವು ಬಿಸಿ ಊಟದ ಮೇಲ್ವಿಚಾರಕರ ಸುಪರ್ದಿಯಲ್ಲಿ ಇರುತ್ತದೆ. ಬಿಸಿ ಊಟದ ಖರ್ಚು ವ್ಯಚ್ಚಗಳ ಪುಸ್ತಕವನ್ನು ಮತ್ತು ನಗದು ಪುಸ್ತಕವನ್ನು  ಮೇಲ್ವಿಚಾರಕರಲ್ಲದೆ ಮಿಕ್ಕ 4 ಜನ ಸಿಬ್ಬಂಧಿಗಳು ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿಯು ನಗದು ಪುಸ್ತಕವನ್ನು ಮುಖ್ಯ ಶಿಕ್ಷಕರೇ ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಬಿಸಿ ಊಟಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಶಾಲೆಯ ವತಿಯಿಂದ ನಾನೇ ಖರೀದಿ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತರಕಾರಿ ಮತ್ತು ಸಾಂಬರ್

ಪದಾರ್ಥಗಳನ್ನು ಖರೀದಿ ಮಾಡುತ್ತಿದ್ದೆನು. ಅಕ್ಕಿ ಬೇಳೆಗಳು ಸರ್ಕಾರದಿಂದ ಸರಬರಾಜು ಆಗುತ್ತಿದ್ದವು. ಸರ್ಕಾರದಿಂದ ಸರಬರಾಜು ಆಗುವ ಅಕ್ಕಿ ಬೇಳೆಯ ಲೆಕ್ಕಾಚಾರವನ್ನು ಬಿಸಿ ಊಟದ ಲೆಕ್ಕ ಪುಸ್ತಕದಲ್ಲಿ ಬರೆದಿಡುತ್ತಿದ್ದೆವು. ಅಕ್ಕಿ ಬೇಳೆಯು ಸರ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ನಮ್ಮ ಶಾಲೆಗೆ ಸರಬರಾಜು ಆಗುತ್ತಿತ್ತು ಎಂದರೆ ಸರಿ. ಸರ್ಕಾರದಿಂದ ಸರಬರಾಜು ಆದ ಅಕ್ಕಿ ಬೇಳೆಯನ್ನು ದಾಸ್ತಾನು ಮಾಡಲು ನಮ್ಮ ಶಾಲೆಯಲ್ಲಿ ಪ್ರತ್ಯೇಕ ಗೋಡಾನ್ ಇರುವುದಿಲ್ಲ. ಅಡಿಗೆ ಕೋಣೆಯಲ್ಲಿಯೇ ಅಕ್ಕಿ ಮತ್ತು ಬೇಳೆಯನ್ನು ದಾಸ್ತಾನು ಮಾಡುತ್ತಿದ್ದೆವು. ಬಿಸಿ ಊಟಕ್ಕೆ ಬೇಕಾದ ಸಾಂಬರ್ ಪದಾರ್ಥಗಳನ್ನು ಮತ್ತು ತರಕಾರಿಯನ್ನು ವಾರಕ್ಕೆ 3 ಬಾರಿ ಖರೀದಿ ಮಾಡುತ್ತಿದ್ದೆವು.

6. ಶಾಲೆಯ ಬಿಸಿ ಊಟದ ಅಡುಗೆ ಕೋಣೆಗೆ ಶಾಲಾ ಸಿಬ್ಬಂಧಿಗಳನ್ನು ಹೊರತುಪಡಿಸಿ ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ಬಂದು ಹೋಗಲು ಅವಕಾಶ ಇರುತ್ತದೆ. ಬಿಸಿ ಊಟಕ್ಕೆ ಸರಬರಾಜು ಆಗುವ ಎಲ್ಲಾ ಸಾಮಗ್ರಿಗಳ ಬಗ್ಗೆ ಲೆಕ್ಕಾ ತಪಾಸಣೆ ಆಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿ ವರ್ಷ ಲೆಕ್ಕಾ ತಪಾಸಣೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಲೆಕ್ಕಾ ತಪಾಸಣೆಯು ಯಾವ ಯಾವ ವರ್ಷ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಪ್ರತಿ ದಿನ ಬಿಸಿ ಊಟವನ್ನು ವಿದ್ಯಾರ್ಥಿಗಳ ಹಾಜರಾತಿಯ ಮೇಲೆ ತಯಾರು ಮಾಡುತ್ತೇವೆ ಎಂದರೆ ಸರಿ. ಬಿಸಿ ಊಟ ತಯಾರು ಮಾಡುವ ಪೂರ್ವದಲ್ಲಿ ಪ್ರತಿ ದಿನ ವಿಧ್ಯಾರ್ಥಿಗಳ ಹಾಜರಾತಿಯ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುತ್ತೇವೆ. ಒಂದು ತಿಂಗಳ  ವಿಧ್ಯಾರ್ಥಿಗಳ ಹಾಜರಾತಿಯ ಆಧಾರದಲ್ಲಿ ಮುಂದಿನ ತಿಂಗಳಿಗೆ ಬಿಸಿ ಊಟಕ್ಕೆ ಬೇಕಾದ ಹಣವನ್ನು ನಿರ್ಧರಿಸುತ್ತಿದ್ದೆವು ಎಂದರೆ ಸರಿ. 2022 ರಲ್ಲಿ ಸರ್ಕಾರದಿಂದ ನಮ್ಮ ಶಾಲೆಗೆ ಬಿಸಿ ಊಟಕ್ಕೆ ಎಷ್ಟು ಹಣ ಮಂಜೂರು ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡುವ ಸಮಯದಲ್ಲಿ ಬಿಸಿ ಊಟದ ಬಾಬ್ತು

ಎಷ್ಟು ಹಣ ಯಾವಾಗ ಸರ್ಕಾರದಿಂದ ಬಿಡುಗಡೆ ಆಗಿರುತ್ತದೆ ಎಂದು ನಾನು ಹೇಳಿಕೆ ನೀಡಿರುವುದಿಲ್ಲ. ಸರ್ಕಾರದಿಂದ ಬಿಡುಗಡೆಯಾದ ಹಣವನ್ನು ಬಿಸಿ ಊಟದ ನಗದು ಪುಸ್ತಕದಲ್ಲಿ ನಮೂದು ಮಾಡುತ್ತಿದ್ದೆವು ಎಂದರೆ ಸರಿ. ಬಿಸಿ ಊಟದ ಸಂಬಂಧಪಟ್ಟಂತೆ ಬ್ಯಾಂಕಿನಲ್ಲಿ ಯಾವ ತರಹದ ಖಾತೆಯನ್ನು ತೆರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಬಿಸಿ ಊಟದ ಬ್ಯಾಂಕ್ ಖಾತೆಯ ನಿರ್ವಾಹಣೆಯನ್ನು ನಾನು ಮಾಡುತ್ತಿರಲಿಲ್ಲ. ಮುಖ್ಯ ಶಿಕ್ಷಕರೇ ಸದರಿ ಖಾತೆಯನ್ನು ನಿರ್ವಾಹಣೆ ಮಾಡುತ್ತಿದ್ದರು. ದಿಃ 27.07.2024 ರಿಂದ ನಾನೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗೋಣಿಬೀಡುವಿನ ಮುಖ್ಯ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 27.07.2024 ರ ಪೂರ್ವದಲ್ಲಿ ನನಗೆ ಬಿಸಿ ಊಟದ ಬ್ಯಾಂಕ್ ಖಾತೆ ಸಂಖ್ಯೆ ಗೊತ್ತಿತ್ತು. ದಿಃ 27.07.2024 ರ ಪೂರ್ವದಲ್ಲಿ ನಾನು ಬಿಸಿ ಊಟದ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡುತ್ತಿರಲಿಲ್ಲ. ಪ್ರತಿ ತಿಂಗಳ ಬಿಸಿ ಊಟದ ಖರ್ಚು ವ್ಯಚ್ಚದ ಹಣವನ್ನು ಮುಂದಿನ ತಿಂಗಳು ಬ್ಯಾಂಕ್ ಖಾತೆಯಿಂದ ಹಣವನ್ನು ನಗದೀಕರಿಸುತ್ತಿದ್ದೆವು. ದಿಃ 04.06.2022 ರಂದು ಬಿಸಿ ಊಟದ ಖರ್ಚಿಗೆ ಸಂಬಂಧಪಟ್ಟ ಹಣವನ್ನು ಬ್ಯಾಂಕ್ ಖಾತೆಯಿಂದ ನಗದೀಕರಿಸಿರುತ್ತೇನೆ. ದಿಃ 04.06.2022 ರಂದು ಬ್ಯಾಂಕ್ ಖಾತೆಯಿಂದ ನಗದೀಕರಿಸಿರುವ ಹಣವನ್ನು 2022 ಮೇ ತಿಂಗಳ ಬಿಸಿ ಊಟದ ಖರ್ಚು ವ್ಯಚ್ಚವಾಗಿರುತ್ತದೆ. ಹಿಂದಿನ ತಿಂಗಳ ಬಿಸಿ ಊಟದ ಖರ್ಚು ವ್ಯಚ್ಚದ ಆಧಾರದಲ್ಲಿ ಮುಂದಿನ ತಿಂಗಳ ಬಿಸಿ ಊಟದ ಖರ್ಚು ವ್ಯಚ್ಚವನ್ನು ನಾವು ನಿರ್ಧಾರ ಮಾಡುತ್ತಿದ್ದು ಒಂದು ವೇಳೆ ಮುಂದಿನ ತಿಂಗಳಿನಲ್ಲಿ ವಿಧ್ಯಾರ್ಥಿಯ ಸಂಖ್ಯೆ ಹೆಚ್ಚಾದಾಗ ಹೆಚ್ಚು ಖರ್ಚಿನ ಬಾಬ್ತು ಹಣವನ್ನು ಕೈಯಿಂದ ಹಾಕುತ್ತಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಿಧ್ಯಾರ್ಥಿಯ ಸಂಖ್ಯೆಯಲ್ಲಿ ಏರು ಪೇರು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಬಿಸಿ ಊಟದ ಖಾತೆಯಿಂದ ಹಣವನ್ನು ಚೆಕ್ಕು ಮೂಲಕ

ನಗದೀಕರಣ ಮಾಡುತ್ತಿದ್ದೆವು. ಬಿಸಿ ಊಟದ ಖಾತೆಯಿಂದ ಹಣ ನಗದೀಕರಣ ಮಾಡಲು ಚೆಕ್ಕನ್ನು ಮುಖ್ಯ ಅಡುಗೆಯವರ ಹೆಸರಿಗೆ ಚೆಕ್ಕನ್ನು ನೀಡುತ್ತಿದ್ದೆವು. ಬಿಸಿ ಊಟದ ಅಡುಗೆಯ ಸಾಂಬಾರು ಪದಾರ್ಥ ಮತ್ತು ತರಕಾರಿ ಖರೀದಿ ಮಾಡಲು ನನ್ನ ಸ್ವಂತ ಹಣವನ್ನು ಖರ್ಚು ಮಾಡಿ ಮುಂದಿನ ತಿಂಗಳಿನಲ್ಲಿ ಬಿಸಿ ಊಟದ ಖಾತೆಯಿಂದ ನಗದೀಕರಣ ಮಾಡಿ ಹಣ ಪಡೆಯುತ್ತಿದ್ದೆನು. ನಾನು ಖರ್ಚು ಮಾಡಿರುವ ಹಣವನ್ನು ಚೆಕ್ಕು ಮೂಲಕ ನಗದೀಕರಣ ಮಾಡಿ ಪಡೆಯುತ್ತಿದ್ದೆನು. ಚೆಕ್ಕು ನಗದೀಕರಣ ಮಾಡಲು ನಾನು ಸ್ವತಃ ಬ್ಯಾಂಕಿಗೆ ಹೋಗುತ್ತಿದ್ದೆನು.

7. ದಿಃ 04.06.2022 ಮತ್ತು ದಿಃ 16.07.2022 ರಂದು ಬ್ಯಾಂಕಿನಿಂದ ಹಣ ನಗದೀಕರಣ ಮಾಡಲು ನಾನು ಬ್ಯಾಂಕಿಗೆ ಹೋಗಿರುತ್ತೇನೆ. ದಿಃ 04.06.2022 ರಂದು ನಾನು ಬ್ಯಾಂಕಿನಿಂದ ರೂ.7905-00 ನ್ನು ಬಿಸಿ ಊಟದ ಖಾತೆಯಿಂದ ನಗದೀಕರಣ ಮಾಡಿಕೊಂಡಿರುತ್ತೇನೆ. ದಿಃ 16.07.2022 ರಂದು ನಾನು ರೂ.16,572-00 ನ್ನು ಬಿಸಿ ಊಟದ ಖಾತೆಯಿಂದ ನಗದೀಕರಣ ಮಾಡಿಕೊಂಡಿರುತ್ತೇನೆ. ಬಿಸಿ ಊಟಕ್ಕೆ ಸಾಮಾನುಗಳನ್ನು ಸಾಲವಾಗಿ ಪಡೆಯಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಖರೀದಿ ಮಾಡಿರುವ ಸ್ವತ್ತುಗಳಿಗೆ ಪಡೆದುಕೊಂಡಿರುವ ಓಚರ್ ಗಳನ್ನು ದಾಸ್ತಾನು ಪುಸ್ತಕದಲ್ಲಿ ನಮೂದು ಮಾಡಿರುತ್ತೀರಾಎಂಬ ಪ್ರಶ್ನೆಗೆ ಸಾಕ್ಷಿಯು ಬಿಲ್ಲು (voucher) ಪುಸ್ತಕಗಳನ್ನು ಇಟ್ಟುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಓಚರ್ ಗಳನ್ನು ಮತ್ತು ದಾಸ್ತಾನು ಪುಸ್ತಕಗಳನ್ನು ನಾನು ಪೊಲೀಸರಿಗೆ ತೋರಿಸಿರುವುದಿಲ್ಲ. ಪೊಲೀಸರು ಸದರಿ ದಾಸ್ತಾನು ಪುಸ್ತಕವನ್ನು ಮತ್ತು ಓಚರ್ ಗಳನ್ನು ನನ್ನ ಬಳಿ ಕೇಳಿರುತ್ತಾರೋ ಇಲ್ಲವೋ ನನಗೆ ನೆನಪಿಲ್ಲ. ನನ್ನ ಹೇಳಿಕೆಯನ್ನು ಪಡೆಯುವ ಪೂರ್ವದಲ್ಲಿ ಪೊಲೀಸರು ಬಿಸಿ ಊಟಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಮಾಡುವಂತೆ ನನ್ನ

ಬಳಿ ಕೇಳಿರುವುದಿಲ್ಲ. ಬಿಸಿ ಊಟದ ಖರ್ಚನ್ನು ಪಡೆದುಕೊಳ್ಳಲು ನನ್ನನ್ನು ಹೊರತುಪಡಿಸಿ ನಮ್ಮ ಶಾಲೆಯಿಂದ ಬೇರೆ ಸಿಬ್ಬಂಧಿಗಳು ಬ್ಯಾಂಕಿಗೆ ಹೋಗುತ್ತಿದ್ದರು. ಎಷ್ಟು ಜನ ಸಿಬ್ಬಂಧಿಗಳು ಬಿಸಿ ಊಟದ ಖರ್ಚುಗಳ ಬಾಬ್ತು ಹಣ ನಗದೀಕರಣ ಮಾಡಲು ಬ್ಯಾಂಕಿಗೆ ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಬ್ಯಾಂಕಿಗೆ ನಗದೀಕರಣಕ್ಕೆ ಸಿಬ್ಬಂಧಿಗಳನ್ನು ಕಳುಹಿಸುವಾಗ ಬ್ಯಾಂಕ್ ಪಾಸ್ ಪುಸ್ತಕವನ್ನು ಕಳುಹಿಸಿಕೊಡುತ್ತಿದ್ದೆವು. ನಗದೀಕರಣಕ್ಕಾಗಿ ಶಾಲೆಯಿಂದ ನೀಡಿರುವ ಚೆಕ್ಕು ಕ್ರಾಸ್ ಚೆಕ್ಕು ಆಗಿರುವುದಿಲ್ಲ, ಒಪನ್ ಚೆಕ್ಕು ಆಗಿರುತ್ತದೆ. ಚೆಕ್ಕನ್ನು ಕ್ರಾಸ್ ಮಾಡದೇ ಒಪನ್ ಚೆಕ್ಕು ನೀಡಿದರೆ 3 ನೇ ವ್ಯಕ್ತಿಯು ಸದರಿ ಚೆಕ್ಕನ್ನು ನಗದೀಕರಣ ಮಾಡಲು ಸಾಧ್ಯತೆ ಇರುತ್ತದೆ ಎಂದರೆ ಸರಿ. ಬಿಸಿ ಊಟದ ಖರ್ಚಿನ ಬಾಬ್ತು ಬ್ಯಾಂಕ್ ಖಾತೆಯಿಂದ ಹಣ ನಗದೀಕರಣ ಮಾಡಲು ಕ್ರಾಸ್ ಚೆಕ್ಕು ನೀಡಬೇಕು ಎಂದು ನಿಯಮ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. 2022 ಮೇ ತಿಂಗಳಿನಲ್ಲಿ ಶಾಲಾ ಬಿಸಿ ಊಟದ ಪಾಸ್ ಪುಸ್ತಕದಲ್ಲಿ ಎಂಟ್ರಿ ಮಾಡಿಸಿರುವುದಿಲ್ಲ. 2022 ರ ಜೂನ್ ತಿಂಗಳಿನಲ್ಲಿ ಶಾಲಾ ಬಿಸಿ ಊಟದ ಪಾಸ್ ಪುಸ್ತಕದಲ್ಲಿ ಎಂಟ್ರಿ ಮಾಡಿಸಿರುವುದಿಲ್ಲ. ಪಾಸ್ ಪುಸ್ತಕವನ್ನು ಎಂಟ್ರಿ ಮಾಡಿಸದಿದ್ದರೆ ಬಿಸಿ ಊಟದ ಖಾತೆಯಲ್ಲಿ ಎಷ್ಟು ಮೊತ್ತ ಇರುತ್ತದೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿ. 2022 ರ ಮೇ ಮತ್ತು ಜೂನ್ ತಿಂಗಳಿನಲ್ಲಿ ನಮ್ಮ ಶಾಲೆಯ ಬಿಸಿ ಊಟ ಖಾತೆಯ ತಕ್ತೆ (ಸ್ಟೇಟ್ಮೆಂಟ್) ನ್ನು ನಾವು ಪಡೆದಿರುವುದಿಲ್ಲ.

8. ನಮ್ಮ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಹೊರತುಪಡಿಸಿ ಹಳೆ ವಿಧ್ಯಾರ್ಥಿಯ ಸಂಘ ಇರುತ್ತದೆ ಎಂದರೆ ಸರಿ. 2022 ರಲ್ಲಿ ಹಳೆ ವಿಧ್ಯಾರ್ಥಿಯ ಸಂಘದ ಅಧ್ಯಕ್ಷರಾಗಿ ಶಿವಕುಮಾರ್ ರವರು ಇದ್ದರು. ದಿಃ 16.07.2022 ರಂದು ನಾನು ಸದರಿ ಶಿವಕುಮಾರ್ ರವರಿಗೆ ದೂರವಾಣಿ ಕರೆ ಮಾಡಿರುವುದಿಲ್ಲ. ದಿಃ 16.07.2022 ರಂದು ನಾನು ಆರೋಪಿಯನ್ನು ರಾತ್ರಿ 10.30 ಗಂಟೆ

ಸಮಯದಲ್ಲಿ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿಃ 16.07.2022 ರಂದು ನಾನು ಗೋಣಿಬೀಡುವಿನ ಕರ್ನಾಟಕ ಬ್ಯಾಂಕ್ ಶಾಖೆಗೆ ಹೋಗಿರುವುದಿಲ್ಲ. ದಿಃ 16.07.2022 ರಂದು ನಾನು ಚಾಸಾ.1 ರವರಿಗೆ ಸುಮಾರು ಸಂಜೆ 4.30 ಗಂಟೆಯ ಅವಧಿಯಲ್ಲಿ ದೂರವಾಣಿ ಕರೆ ಮಾಡಿರುತ್ತೇನೆ. ದಿಃ 16.07.2022 ರಂದು ನಾನು ಬಿಸಿ ಊಟದ ಬ್ಯಾಂಕ್ ಖಾತೆಯ ದಾಖಲಾತಿಯನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಪರಿಶೀಲನೆ ಮಾಡಿರುವ ದಾಖಲಾತಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ, ನಮ್ಮ ಶಾಲೆಯ ಮುಖ್ಯ ಶಿಕ್ಷಕರಿಗೆ ಸದರಿ ದಾಖಲಾತಿಯನ್ನು ನೀಡಿರುತ್ತೇನೆ. ದಿಃ 28.04.2022 ರಿಂದ ದಿಃ 16.07.2022 ರವರೆಗಿನ ದಾಖಲಾತಿಯನ್ನು ಕೆನರಾ ಬ್ಯಾಂಕಿನಿಂದ ಪಡೆದು ಪರಿಶೀಲನೆ ಮಾಡಿರುತ್ತೇನೆ. ನನ್ನ ಬಳಿ ಸ್ವಂತ ಬ್ಯಾಂಕ್ ಖಾತೆ ಇರುತ್ತದೆ. ಬ್ಯಾಂಕ್ ಖಾತೆಯನ್ನು ಯಾವ ರೀತಿ ನಿರ್ವಾಹಣೆ ಮಾಡಬೇಕು ಎನ್ನುವ ಅನುಭವ ನನಗೆ ಇರುತ್ತದೆ. ನನ್ನ ಬ್ಯಾಂಕ್ ಖಾತೆಯು ಮೂಡಿಗೆರೆಯ ಕೆನರಾ ಬ್ಯಾಂಕಿನಲ್ಲಿ ಇರುತ್ತದೆ. ನನ್ನ ಬ್ಯಾಂಕ್ ಖಾತೆಯ ಸಂಖ್ಯೆ 1162101011626 ಆಗಿರುತ್ತದೆ. ಸದರಿ ಬ್ಯಾಂಕ್ ಖಾತೆಯು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಬ್ಯಾಂಕ್ ಖಾತೆಗೆ ನಾನು ನನ್ನ ಮೊಬೈಲ್ ನಂಬರ್ ನ್ನು ನೀಡಿರುತ್ತೇನೆ. ನನ್ನ ವಯಕ್ತಿಕ ಬ್ಯಾಂಕ್ ಖಾತೆಯನ್ನು ಮೊಬೈಲ್ ಫೋನ್ ಮೂಲಕನು ನಿರ್ವಹಿಸುತ್ತೇನೆ. ಬಿಸಿ ಊಟದ ಬ್ಯಾಂಕ್ ಖಾತೆಯನ್ನು ದಿಃ 16.07.2022 ರಂದು ಎಂಟ್ರಿ ಮಾಡಿದ ನಂತರದಲ್ಲಿ ಪೊಲೀಸರು ನನಗೆ ಸದರಿ ಸ್ಟೇಟ್ಮೆಂಟ್ ನ್ನು ತೋರಿಸಿರುವುದಿಲ್ಲ. ಬಿಸಿ ಊಟದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ಎಂಟ್ರಿಯನ್ನು ನಾನು ಲೆಕ್ಕಾಚಾರ ಮಾಡಿರುವುದಿಲ್ಲ.

9. ಬ್ಯಾಂಕಿನ ಶಾಖೆಗೆ ಪ್ರತ್ಯೇಕ IFSC Code ಇರುತ್ತದೆ ಎಂದರೆ ಸರಿ. ನಿ.ಪಿ.5 ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ನನ್ನ ಬಳಿ ಇರುವ ಮೊಬೈಲ್

ಫೋನ್ ನೋಕಿಯಾ ಕಂಪನಿಯ ಸ್ಮಾರ್ಟ್ ಫೋನ್ ಆಗಿರುತ್ತದೆ. ಮೊಬೈಲ್ ಹಾಂಡ್ ಸೆಟ್ ನ್ನು ಗುರುತಿಸಲು IMEI ನಂಬರ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಿಮ್ ಕಾರ್ಡು ಮೂಲಕವೇ ಮೊಬೈಲ್ ನಂಬರ್ ಗೊತ್ತಾಗುತ್ತದೆ ಎಂದರೆ ಸರಿ. ಸ್ಮಾರ್ಟ್ ಫೋನ್ ಮೂಲಕ ಬ್ಯಾಂಕ್ ಖಾತೆಯನ್ನು ನಿರ್ವಹಿಸಲು ಡಾಟಾ ಪ್ಯಾಕ್ ಇರಬೇಕು ಅಥವ wifi ಸಂಪರ್ಕ ಇರಬೇಕು ಎಂದರೆ ಸರಿ. ಈ ಪ್ರಕರಣದ ಮೊಬೈಲ್ ಫೋನ್ ನನ್ನು ನನಗೆ ತೋರಿಸಿರುವುದಿಲ್ಲ. ನನ್ನ ಮೊಬೈಲ್ ಫೋನ್ ನಲ್ಲಿ ನನ್ನ ಖಾಸಗಿ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡಲು App Download ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡಲು ನಾನು ನನ್ನ ಮೊಬೈಲ್ ಫೋನ್ ನಂಬರ್ ಅನ್ನು ನೀಡಿರುತ್ತೇನೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡಲು ಎ.ಟಿ.ಎಂ. ಕಾರ್ಡು ಪಡೆದುಕೊಂಡಿರುತ್ತೇನೆ. ಸ್ಮಾರ್ಟ್ ಫೋನ್ ಮೂಲಕ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡಲು ನಾನು ಬ್ಯಾಂಕಿಗೆ Registration formalities ಗಳನ್ನು ಸಂಪೂರ್ಣಗೊಳಿಸಿರುತ್ತೇನೆ ಎಂದರೆ ಸರಿ. ನನ್ನ ಮೊಬೈಲ್ ಫೋನ್ ನಲ್ಲಿ ನನ್ನ ಬ್ಯಾಂಕ್ ಖಾತೆಯನ್ನು ನಿರ್ವಾಹಣೆ ಮಾಡಲು ಪ್ರತ್ಯೇಕ User name ಮತ್ತು Password ಇರುತ್ತದೆ ಎಂದರೆ ಸರಿ. ನನ್ನ ಬ್ಯಾಂಕ್ ಖಾತೆಯನ್ನು ಸ್ಮಾರ್ಟ್ ಫೋನ್ ಮೂಲಕ ನಿರ್ವಹಿಸಲು Profile password and login password ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸ್ಮಾರ್ಟ್ ಫೋನ್ ನಲ್ಲಿ ಬ್ಯಾಂಕ್ ಖಾತೆಯನ್ನು ನಿರ್ವಹಿಸಲು User name ಮತ್ತು Password, Profile password and login password, Bank application, Installation ಅನ್ನು ನನ್ನ ಮಗನೇ ಮಾಡಿಕೊಟ್ಟಿರುತ್ತಾನೆ. ನನ್ನ ಸ್ಮಾರ್ಟ್ ಫೋನ್ ನಲ್ಲಿ Lock Password and Bank Password ಇರುತ್ತದೆ

ಎಂದರೆ ಸರಿ. ನನ್ನ Bank Password ನನ್ನ ಮಗನಿಗೆ ಗೊತ್ತಿರುವುದಿಲ್ಲ. ನನ್ನ Bank Password ನನ್ನ ಮಗನಿಗೆ ಗೊತ್ತಿದ್ದರು ಸಹ ಗೊತ್ತಿದೆ ಎಂದು ಒಪ್ಪಿಕೊಂಡರೆ ಈ ಪ್ರಕರಣದಲ್ಲಿ ತೊಂದರೆಯಾಗುತ್ತದೆ ಎನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನಮ್ಮ ಶಾಲೆಯ ಬಿಸಿ ಊಟದ ಲೆಕ್ಕಾಚಾರದಲ್ಲಿ ವ್ಯತ್ಯಾಸ ಇರುತ್ತದೆ ಎಂದು 2022 ನೇ ಇಸವಿಯಲ್ಲಿ ನಮ್ಮ ಮೇಲಾಧಿಕಾರಿಗಳು ನಮ್ಮ ಶಾಲೆಗೆ ಬಂದು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಿಸಿ ಊಟದ ಲೆಕ್ಕಾಚಾರದ ನಿರ್ವಾಹಣೆಯಲ್ಲಿ ಅವ್ಯವಹಾರ ನಡೆದಿದೆ ಎಂದು ನನಗೆ ಮತ್ತು ಚಾಸಾ.1 ರವರಿಗೆ ನಮ್ಮ ಇಲಾಖೆಯಿಂದ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮೇಲೆ ಆಗಿರುವ ಆಪಾದನೆಗಳನ್ನು ಮುಚ್ಚಿ ಹಾಕುವ ಉದ್ದೇಶದಿಂದ ಆರೋಪಿಯ ವಿರುದ್ದ ಚಾಸಾ.1 ರವರ ಮೂಲಕ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿ ಪೊಲೀಸರ ಮುಂದೆ ಸುಳ್ಳು ಹೇಳಿಕೆಯನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಶಾಲೆಯ ಬಿಸಿ ಊಟದ ವ್ಯವಹಾರದ ಲೆಕ್ಕಪತ್ರಗಳನ್ನು ನಾನು ಮತ್ತು ಚಾಸಾ.1 ರವರು ಮುಚ್ಚಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ. ನಮ್ಮ ಮೇಲೆ ಆಗಿರುವ ಆಪಾದನೆಗಳಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಆಪಾದನೆಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ